ಅಸಲು ದಾವಾ ನಂ. 17/2021 ಪಿಡಬ್ಲೂ : 1

ದಿನಾಂಕಃ 05-12-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 12 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಡಿ ಎಸ್ ಬಿ ವಕೀಲರಿಂದಃ**

21. ಶಾರದಾ ವಿಶ್ವೇಶ್ವರ ಭಟ್ ಗೋಪಿರವರು 2020 ನೇ ಇಸವಿಯ ಫೆಬ್ರುವರಿ ತಿಂಗಳಿನಲ್ಲಿ ತೀರಿ ಹೋಗಿರುತ್ತಾರೆ . ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರ ಗಂಡ 2012 ನೇ ಇಸವಿಯ ಫೆಬ್ರುವರಿ ತಿಂಗಳಿನಲ್ಲಿ ತೀರಿಹೋಗಿರುತ್ತಾರೆ . ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ದಾಂಡೇಲಿಯಲ್ಲಿ ತೀರಿ ಹೋಗಿರುತ್ತಾರೆ . ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ತೀರಿಹೋಗುವಾಗ ದಾಂಡೇಲಿಯಲ್ಲಿ 1 ಮತ್ತು 12 ನೇ ಪ್ರತಿವಾದಿಯರ ಜೊತೆಯಲ್ಲಿ ವಾಸ ಮಾಡುತಿದ್ದರು ಎಂದರೆ ಸರಿ . ಅದೇ ರೀತಿ ಮೇಲೆ ಹೇಳಿದ ವಿಶ್ವೇಶ್ವರ ಭಟ್ ಗೋಪಿರವರು ಸಹ ತೀರಿ ಹೋಗುವಾಗ ದಾಂಡೇಲಿಯಲ್ಲಿ 1 ಮತ್ತು 12 ನೇ ಪ್ರತಿವಾದಿಯರ ಜೊತೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಧಾರೇಶ್ವರದಲ್ಲಿ ತೀರಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ . ದಾವಾ ಸಿ ಶೆಡ್ಯೂಲ್ ಅನುಕ್ರಮ ಸಂಖ್ಯೆ 3 ರಲ್ಲಿ ಹೇಳಿರುವ ಸರ್ವೆ ನಂ. 110 ರಲ್ಲಿ ಸದರಿ ವಿಶ್ವೇಶ್ವರ ಭಟ್ ಗೋಪಿರವರಿಗೆ ಸ್ವಂತ ಮನೆ ಇತ್ತು, ಸದರಿ ಸ್ವಂತ ಮನೆಯಲ್ಲಿ ಅವರು ತೀರಿ ಹೋಗಿರುತ್ತಾರೆ . ಸದರಿ ವಿಶ್ವೇಶ್ವರ ಭಟ್ ಗೋಪಿರವರು ತೀರಿ ಹೋದ ನಂತರ ಕೆಲವು ಕಾಲ ಮೇಲೆ ಹೇಳಿದ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಧಾರೇಶ್ವರದಲ್ಲಿ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ . ಆ ವೇಳೆಗೆ ಅವರು ಒಬ್ಬರೇ ಧಾರೇಶ್ವರದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ . ಆ ರೀತಿ ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಧಾರೇಶ್ವರದಲ್ಲಿ ಒಬ್ಬರೇ ಇದ್ದದ್ದರಿಂದ 1 ಮತ್ತು 12 ನೇ ಪ್ರತಿವಾದಿಯರು ಧಾರೇಶ್ವರಕ್ಕೆ ಹೋಗಿ ತಾಯಿಯ ಹಾಗೆ ಅವರನ್ನು ಪ್ರೀತಿ ವಾತ್ಸಲದಿಂದ ನೋಡಿಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ .

22. ದಾವಾ ಪ್ರೀತ್ರಾರ್ಜಿತ ಆಸ್ತಿಗಳಲ್ಲಿ ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರಿಗೂ ಸಹ ಅಂಶವಾರಿ ಹಕ್ಕು ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ , ಇರಬಹುದು ಎಂದು ನುಡಿಯುತ್ತಾರೆ . 1 ಮತ್ತು 12 ನೇ ಪ್ರತಿವಾದಿಯರು ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರನ್ನು ಪ್ರೀತಿಯಿಂದ ನೋಡಿಕೊಂಡಿದ್ದರಿಂದ, ಅವರಿಗೆ ಏನಾದರೂ ಕೊಡಬೇಕು ಎಂಬ ಇಚ್ಛೆಯಿಂದ ದಿಃ 23-12-2016 ರಂದು ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು 12 ನೇ ಪ್ರತಿವಾದಿಗೆ ಯೋಗ್ಯ ಸಾಕ್ಷಿದಾರರ ಸಮಕ್ಷಮ ಒಂದು ವಿಲ್ ನಾಮೆಯನ್ನು ಬರೆಸಿಟ್ಟಿದ್ದರು ಎಂದರೆ ಸರಿಯಲ್ಲ . ಸದರಿ ವಿಲ್ ನಾಮೆಯನ್ನು ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಸ್ವಇಚ್ಛೆಯಿಂದ ಬರೆಯಿಸಿ ನೋಟರಿಯವರ ಸಮಕ್ಷಮ ದೃಢಿಕರಣ ಮಾಡಿಸಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಯಲ್ಲಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಸದರಿ ವಿಲ್ ನಾಮೆಯಲ್ಲಿ ನಮೂದಿಸಿರುವ ಆಸ್ತಿಗಳಲ್ಲಿ ತನಗೆ ಇರುವ ಅಂಶವಾರಿ ಹಕ್ಕು ತನ್ನ ಮರಣಾ ನಂತರ 12 ನೇ ಪ್ರತಿವಾದಿಗೆ ಸೇರಬೇಕು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಶಾರದಾ ವಿಶ್ವೇಶ್ವರ ಭಟ್ ಗೋಪಿರವರ ಮುದಿ ವಯಸ್ಸಿನಲ್ಲಿ ನಾವಾಗಲೀ , ಅವರ ಇತರ ಯಾವುದೇ ಸಂಬಂಧಿಕರಾಗಲೀ ಅವರ ಯೋಗಕ್ಷೇಮವನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . 1 ಮತ್ತು 12 ನೇ ಪ್ರತಿವಾದಿಯರು ಮಾತ್ರ ಅವರ ಸಂಪೂರ್ಣ ಯೋಗಕ್ಷೇಮ , ಔಷದೋಪಚಾರ ಮತ್ತು ಆರೈಕೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ . ಮೇಲೆ ಹೇಳಿದ ವಿಲ್ ನಾಮೆಯ ಪ್ರಕಾರ ಶಾರದಾ ವಿಶ್ವೇಶ್ವರ ಭಟ್ ಗೋಪಿರವರ ಹಕ್ಕಿನ ಎಲ್ಲಾ ಆಸ್ತಿಗಳಿಗೆ 12 ನೇ ಪ್ರತಿವಾದಿಯೇ ಹಕ್ಕುದಾರರು ಎಂದರೆ ವಿಲ್ ನಾಮೆಯೇ ಸುಳ್ಳು ಎಂದು ನುಡಿಯುತ್ತಾರೆ . ದಿಃ 23-12-2016 ರಂದು ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಬರೆದಿಟ್ಟಿರುವ ವಿಲ್ ನಾಮೆಯ ಬಗ್ಗೆ ವಾದಿಯರಾದ ನಮಗೆ ಆ ವೇಳೆಯಲ್ಲಿಯೇ ಗೊತ್ತಿತ್ತು ಎಂದರೆ ಸರಿಯಲ್ಲ. ಶಾರದಾ ವಿಶ್ವೇಶ್ವರ ಭಟ್ ಗೋಪಿರವರ ಹಕ್ಕಿನ ಆಸ್ತಿಗಳನ್ನು ಅವರ ಮೃತಪಟ್ಟ ನಂತರ 12 ನೇ ಪ್ರತಿವಾದಿಯು ಕಬ್ಜಾ ಮಾಡಿ ಬಂದಿರುತ್ತಾರೆ ಎಂದರೆ ಸರಿಯಲ್ಲ . ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಕಾಯ್ದೆಬದ್ಧವಾಗಿ ಮೇಲೆ ಹೇಳಿದ ವಿಲ್ ನಾಮೆಯನ್ನು ಬರೆದಿಟ್ಟಿರುವುದರಿಂದ ಅದನ್ನು ಪ್ರಶ್ನೆ ಮಾಡುವ ಅಧಿಕಾರ ನಮಗೆ ಇಲ್ಲ ಎಂದರೆ ಸರಿಯಲ್ಲ.

1 ಮತ್ತು 12 ನೇ ಪ್ರತಿವಾದಿಯರ ಪರವಾಗಿ ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು ಹಾಗೂ 8 ಹಾಗೂ 11 ನೇ ಪ್ರತಿವಾದಿಯರ ಪರವಾಗಿ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.